ಇ) ಹಾಗಿದ್ದರೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಯಾವಾಗ ಮಂಜೂರು ಮಾಡಲಾಗುವುದು?

ಮಾನ್ಯ ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ) ಬಿಜಾಪುರು ಜಿಲ್ಲೆಯ ಬಸವನಬಾಗೇವಾಡಿ ಕ್ಷೇತದ ಗೊಳಸಂಗಿಯಲ್ಲಿ ಒಂದು ಸರ್ಕಾರಿ ಪ್ರಥಮ ದರ್ಜೆಕಾಲೇಜಿದೆ.

ಆ) ಹೌದು.

ಇ) ಬಿಜಾಪುರದಲ್ಲಿ 2005–06ನೇ ಶೈಕ್ಷಣಿಕ ಕಾಲಿನಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

2457: (2688) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) ಮಾನ್ಯ ಡಾ. ಹೆಚ್.ಸಿ. ಮಹಾದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು ಅವುಗಳಿಗೆ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ ಅನುದಾನ ಎಷ್ಟು? ಬಿಡುಗಡೆ ಮಾಡಿದ ಹಣ ಎಷ್ಟು; (ವರ್ಷವಾರು ವಿವರ ನೀಡುವುದು);

ಆ) ನಿಗದಿಪಡಿಸಿದ ಅನುದಾನಕ್ಕಿಂತ ಕಡಿಮೆ ಹಣವನ್ನು ಸರ್ಕಾರ ಬಿಡುಗಡೆ ಮಾಡಿರುವುದು ನಿಜವೇ? ಹಾಗಿದ್ದರೆ ಬಿಡುಗಡೆ ಮಾಡಿದ ಕಡಿಮೆ ಮೊತ್ತ ಎಷ್ಟು?

ಇ) ಇದರಿಂದ ಗ್ರಾಮ ಪಂಚಾಯ್ತಿಗಳ ಅಭಿವೃದ್ಧಿ ಕಾಮಗಾರಿಗಳು ಕುಂಠಿತವಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ?

ಈ) ಹಾಗಿದ್ದರೆ, ನಿಗದಿಪಡಿಸಿದ ಪೂರ್ಣ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಪೂರ್ಣ ವಿವರ ನೀಡುವುದು?

ಮಹಾದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ರಾಜ್ಯದಲ್ಲಿ ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ: 5651.

(ರೂ.ಲಕ್ಷಗಳಲ್ಲಿ)

ವರ್ಷ	ನಿಗದಿಪಡಿಸಿದ ಅನುದಾನ	ಬಿಡುಗಡೆ ಮಾಡಿರುವ ಅನುದಾನ
200–03	19808	13886
2003–04	28295	23653
2004–05 (ಫೆಬ್ರವರಿ 05 ಅಂತ್ಯದವರೆಗೆ)	28265	18840

ಆ) ಹೌದು

(ರೂ.ಲಕ್ಷಗಳಲ್ಲಿ)

2003–03	5921
2003–04	4642
2004–05 (ಫೆಬ್ರವರಿ 05 ಅಂತ್ಯದವರೆಗೆ)	9425

ಇ) ಭಾವಿಸಿದೆ.

ಈ) 2004–05 ನೇ ಚರ್ಷದಲ್ಲಿ ಗ್ರಾಮ ಪಂಚಾಯಾತಿಗಳಿಗೆ ದಿನಾಂಕ: 31–03–2005 ರೊಳಗಾಗಿ ಅವರ ಲೆಕ್ಕಕ್ಕೆ ಸೇರಬೇಕಾದ ರೂ.5.00 ಲಕ್ಷ ಬಿಡುಗಡೆಗೊಳಿಸಲಾಗುವುದು. 2005–06 ವರ್ಷದಿಂದ ರೂ.125 ಲಕ್ಷದಂತೆ ನಾಲ್ಕು ಕಂತಿನಲ್ಲಿ ಗ್ರಾಮ ಪಂಚಾಯತಿಗಳಿಗೆ ತಲಾನುದಾನ ಬಿಡುಗಡೆ ಮಾಡಲಾಗುವುದು.

2458: (2959) ಶ್ರೀ ಬಾಲಕೃಷ್ಣ ಹೆಚ್.ಸಿ (ಮಾಗಡಿ) ಮಾನ್ಯ ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಕ್ಷೇತದೆದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು; ಅವುಗಳು ಎಲ್ಲೆಲ್ಲಿವೆ;

ಆ) ಈ ಕಾಲೇಜುಗಳಲ್ಲಿ ಕೊಠಡಿಗಳ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಬಂದಿದ್ದರೆ, ಕೊಠಡಿಗಳನ್ನು ನಿರ್ಮಿಸಿಕೊಡಲು ಸರ್ಕಾರದ ಕ್ರಮವೇನು;

ಈ) ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಬಂದಿದ್ದಲ್ಲಿ ಕೊರತೆ ಇರುವ ಉಪನ್ಯಾಸಕರನ್ನು ಯಾಬಾಗ ಭರ್ತಿ ಮಾಡಲಾಗುವುದು?

ಮಾನ್ಯ ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ) 02 ಕಾಲೇಜುಗಳು

(1) ಮಾಗಡಿ

(2) ಕುದೂರು

ಆ) ಹೌದು

ಇ) 2004–05ನೇ ಸಾಲಿನಲ್ಲಿ ಕಟ್ಟಡಗಳಿಗೆ ಒದಗಿಸಲಾದ ಅನುದಾನದಲ್ಲಿ ಕೊರತೆ ಇದ್ದ ಕಾರಣ ಕೊಠಡಿಗಳ ನಿರ್ಮಾಣ ಮಾಡಲಾಗಿಲ್ಲ.

ಈ) ಇಲ್ಲ

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.